# ಯು ಕೆ ಕನ್ನಡ ಬಳಗದ ವಿಜೃಂಭಣೆಯ ದೀಪಾವಳಿ ಕಾರ್ಯಕ್ರಮ,

16 ನವೆಂಬರ್, 2013

ವರದಿ: ಡಾ. ಶ್ರೀವತ್ಸ ದೇಸಾಯಿ, ಡೋಂಕಾಸ್ಟರ್,
ಮತ್ತು ಡಾ ಶಿವಪ್ರಸಾದ್, ಶೆಫೀಲ್ಡ್ ಯು. ಕೆ.



ಯು ಕೆ ಕನ್ನಡ ಬಳಗ ಕಳೆದ ವಾರ ದೀಪವಳಿ ಹಬ್ಬವನ್ನೂ ಸ್ವಾಮಿ ವಿವೇಕಾನಂದರ 150ನೆಯ ಜಯಂತಿಯನ್ನೂ ಜೊತೆಗೂಡಿಸಿ ಬಹಳೇ ಸಡಗರದಿಂದ ಆಚರಿಸಿತು. ಇಂಗ್ಲಂಡಿನ ವಾಯವ್ಯ ಪ್ರದೇಶದ, ಗಾಳಿ-ಮಳೆಗೆ ಹೆಸರುವಾಸಿಯಾದ ಲ್ಯಾಂಕಾಶಾಯರಿನ (ಕ್ಷಮಿಸಿ, ಮರ್ಸಿ ಸೈಡ್) ಪ್ರೆಸ್ಕಾಟ್ ಊರಿನಲ್ಲಿ ಉತ್ತರ ವೇಲ್ಸಿನ ಕನ್ನಡ ಬಳಗದ ಗುಂಪು ರಾಜೀವ ಮೇತ್ರಿಯವರ ನೇತೃತ್ವದಲ್ಲಿ ಹಗಲಿರುಳು ದುಡಿದು ಎಲ್ಲರ ಕಣ್ಣು-ಮನಸ್ಸು-ಉದರಕ್ಕೆ ತೃಪ್ತಿ ಕೊಟ್ಟರು! ಸುಮಾರು ಎರಡು ನೂರಕ್ಕೆ ಹತ್ತಿರ ಜನ ಕೂಡಿದ್ದರೆಂದು ಎಂದು ಎಣಿಕೆ. ಅಕ್ಕ ಪಕ್ಕದಲ್ಲಿಯ ಬೇರೆ ಸಮಾರಂಭಗಳು ಕೆಲ ಸದಸ್ಯರನ್ನು ಆಕರ್ಷಿಸಿದ್ದರೂ ಬಂದು ಸೇರಿದ ಕನ್ನಡಿಗರು ಇಡೀ ದಿನದ ಕಾರ್ಯಕ್ರಮದಲ್ಲಿ ಪ್ರಸ್ತುತವಾದ ರೂಪಕ, ಹಾಡು, ನೃತ್ಯ, ಚಿಕ್ಕ ಮಕ್ಕಳ ಉತ್ಸಾಹದ ಚಟುವಟಿಕೆಗಳನ್ನು ನೋಡಿ ಸಂತೋಷ ಪಟ್ಟರು. ಕೇವಲ ನಾಲ್ಕೈದು ವಾರಗಳ ಸಮಯದಲ್ಲಿ ಸಂಯೋಜಿತವಾದ ವೈವಿಧ್ಯಮಯ ಮನರಂಜನ ಕಾರ್ಯಕ್ರಮ, ವಿವೇಕಾನಂದರ ಬೋಧನೆಯನ್ನು ಆಳವಾಗಿ ಅಭ್ಯಸಿಸಿದ ವಿದ್ವಾಂಸ ಶ್ರಿ ಜೈ ಲಖಾನಿಯವರ ಚಿಕ್ಕ ಆದರೆ ಮನದಟ್ಟುವ ಉಪನ್ಯಾಸ ಈ ಸಲದ ಮುಖ್ಯ ವಿಷಯಗಳಾಗಿದ್ದವು. ಕಾಕತಾಳೀಯತೆಯೆಂದರೆ ಇಂದಿಗೆ ಸರಿಯಾಗಿ 121 ವರ್ಷಗಳ ಹಿಂದೆ (ನವೆಂಬರ್ 9-24, 1892) ವಿವೇಕಾನಂದರು ಅಂದಿನ ಮೈಸೂರು ಮಹಾರಾಜ ಚಾಮರಾಜೇಂದ್ರ ಒಡೆಯರರ ಅತಿಥಿಯಾಗಿ ಉಳಿದಿದ್ದರು! ಇಂದು ಶ್ರಿ ಜೈ ಲಖಾನಿಯವರು ನಮ್ಮ ಹೊಸ ಅಧ್ಯಕ್ಷ ಗೌಡಗೆರೆ ಜಯರಾಮರೊಂದಿಗೆ ದೀಪ ಹಚ್ಚಿ ಕಾರ್ಯಕ್ರಮನ್ನು ಉಧಾಟಿಸಿದ ನಂತರ ಮಕ್ಕಳಿಂದ ಶ್ಲೋಕ ವಾಚನ, ಶ್ರೀಲಕ್ಷ್ಮಿ ಪೂಜೆಯಾದ ಮೇಲೆ ಅತಿಥಿಗಳಿಂದ ಸ್ವಾಮಿ ವಿವೇಕಾನಂದರ ಭಾವ ಚಿತ್ರದ ಅನಾವರಣವಾಯಿತು. ಡಾ ಸವಿತಾ ಮಧುಸೂದನರು ತಾವು ಬರೆದ ಆ ಯೋಗಿಯ ಬಗೆಗಿನ ಉತ್ತಮ ರೂಪಕವನ್ನು ಮಕ್ಕಳ ಅಭಿನಯದೊಂದಿಗೆ ಪ್ರಸ್ತುತಗೊಳಿಸಿದ್ದು ಎಲ್ಲರ ಸ್ತುತಿಗೆ ಪಾತ್ರವಾಯಿತು. ಊಟದ ನಂತರ ಲಖಾನಿಯವರು ಎಲ್ಲರ ಮನಸೆಳೆಯುವಂತೆ ಮಾಡಿದ ಭಾಷಣದಲ್ಲಿ ವಿವೇಕಾನಂದರ ತತ್ವಗಳು, ಅವರ ಮಾನವತಾವಾದವನ್ನು ಹೇಗೆ ಇಂದಿನ ಚಿಂತನೆಗೆ ಅಳವಡಿಸಬಹುದು ಎಂದು ಮಂಡಿಸಿದರು.



ಆನಂತರ ಸ್ಥಳೀಯ ಕಲಾವಿದರಿಂದ ಗಾಯನ, ಬಳಗದ ಪುಟ್ಟ- ದೊಡ್ಡ ಮಕ್ಕಳು ಕರ್ನಾಟಕಗದ ಐತಿಹಾಸಿಕ ವ್ಯಕ್ತಿಗಳನ್ನು ಸಮಕಾಲೀನ ವಸ್ತ್ರ-ವೇಷ -ಮಾತಿನಿಂದ ಜೀವ ತುಂಬಿ ಪ್ರೇಕ್ಷಕರನ್ನು ರಂಜಿಸಿದರು. ವೇದಿಕೆಯ ಮೇಲೆ ಅವರ ಕವಾಯತನ್ನು ನೋಡಿ ನಲಿದಿದ್ದೇ ಅಲ್ಲ

ಉಳಿದವರಿಗೆ ಇತಿಹಾಸದ ಪರಿಚಯವೂ ಆಯಿತು. 'ಕಪ್ಪ ಕೊಡಲಾರೆ' ಎಂದು ಆಂಗ್ಲರಿಗೆ ಧಿಕ್ಕಾರ ಹಾಕಿದ ಚೆನ್ನಮ್ಮ ರಾಣಿ, ಆ ಚಿಕ್ಕ ಕೃಷ್ಣದೇವರಾಯ ಮೀಸೆ ತಿರುವಿದ ಠೀವಿ, ಕತ್ತಿ-ಢಾಲು ಝಳಪಿಸಿದ ಕೆಂಪೇಗೌಡ ಇವರ ಚಿತ್ರ ಮನದಲ್ಲಿ ಅಚ್ಚೊತ್ತಿತ್ತು!

ಇವಲ್ಲದೆ, ರಾಜಾರಾಮರ ಶಾಸ್ತ್ರೀಯ ವೇಣು ವಾದನ, ಡಾ ಮಧುಸೂದನರ ವೀಣೆ, ಡಾ ಜೈಶಂಕರರ



ಮೃದಂಗ, ರವಿಶ್ ಅವರ ತಬಲಾ, ಕಾರಿಯಪ್ಪನವರ ಗಿಟಾರ್, ಇವೆಲ್ಲ ಕಾರ್ಯಕ್ರಮದ ವೈವಿಧ್ಯತೆಯನ್ನು ಸಾರಿ ಹೇಳುತ್ತಿತ್ತು. ಸಾಯಂಕಾಲ ಡಾ ಉಷಾ, ಸುನೀಲಾ ಮತ್ತು ಅವರ ಎಳೆಯ ಸಂಗಡಿಗರಿಂದ ಪ್ರದರ್ಶಿತವಾದ "ಪುರಂದರ ನಮನ" ನೃತ್ಯ ರೂಪಕ ಎಲ್ಲರ ಮನಸ್ಸನ್ನು ಸೆಳೆಯಿತು. 'ವೈದ್ಯರಾದರೂ ನೃತ್ಯ ಮರೆತಿಲ್ಲ; ಪರದೇಶವಾದರೂ ಸಂಸ್ಕೃತಿ ಬಿಡೊಲ್ಲ' ಎನ್ನುವ ಅವರ ಧ್ಯೇಯ ನಮ್ಮ ಬಳಗದ ಅಡಿಕಟ್ಟಲೆಯನ್ನು ಪ್ರತಿಬಿಂಬಿಸುವಂತಿತ್ತು! ನಮ್ಮ ನಾಡಿನ ಸಮೃದ್ಧ ಸಂಸ್ಕೃತಿಯ ಬಗೆಗೆ ಹೆಮ್ಮೆ ಇಮ್ಮಡಿಸಿತು. ಏನಿಲ್ಲವೆಂದರೂ ಇಂಥ ಸಂದರ್ಭಗಳಲ್ಲಿ ಕುಂದು ಕೊರತೆಗಳಿರುವವೇ. ಎಂದಿನಂತೆ ಮೈಕ್-ಧ್ವನಿಪ್ರಸಾರಣ ಮೈಕಾಸುರ ರಾಕ್ಷಸನ ಉಪಟಳ ಒಮ್ಮೊಮ್ಮೆ ತಲೆಬೇನೆ ಕೊಟ್ಟಿತ್ತು. ಒಬ್ಬ ಹಿರಿಯ ಸದಸ್ಯರ ಉದ್ಗಾರ ಹೀಗಿತ್ತು: "ರಾವಣ ಕೆಟ್ಟುದು ಸೀತೆಯಿಂದೆ; ಕಾರ್ಯಕ್ರಮ ಕೆಟ್ಟುದು ಮೈಕಾಸುರನಿಂದೇ!" ನಂತರ ವಿಜಯ ಕುಮಾರರ ರಸ ಪ್ರಶ್ನೆಯ ತಮಾಷೆ. ಆದರೆ ಕೊನೆಯಲ್ಲಿ ಬೆಳ್ಳಿ ಪರದೆಯಮೇಲೆ ಕಂಡ "ಸುಳ್ಳೇ ಸತ್ಯ" ಎಂಬ ಸಿನಿಮಾದ ನಾಯಕನ ಪ್ರಶ್ನೆಗಳು ಮಾತ್ರ ಮನಸ್ಸನ್ನು ಕಲಕಿದವು. ನಮ್ಮಂತೆ ಅವನೂ ತ್ರಿಶಂಕು ಸ್ವರ್ಗದ ಸಂದಿಗ್ಧತೆಯಲ್ಲಿ ಚಡಪಡಿಸುತ್ತಿದ್ದ, ಎಂದೆನಿಸಿತು!

ರಾತ್ರಿ ಊಟ ಮಾಡಿ ಮರಳಿ ಮಂಜಿನಲ್ಲಿ ಹೊರಟಾಗ ದೀಪಾವಳಿಯ ಬೆಳಕಿನ, ಕಾರ್ಯಕ್ರಮದ ಸವಿನೆನಪನ್ನೇ ಮೆಲಕು ಹಾಕುತ್ತಿದ್ದೆ!

